MVC No.315/2023 PW-1

(ಇಂದು ದಿನಾಂಕಃ 02-08-2024 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಭೋದಿಸಲಾಯಿತು)

**<u>ಪಾಟೀ ಸವಾಲು ಶ್ರೀ ವಿ.ಎನ್.ಎಮ್ ಎದುರುದಾರ ಪರ ವಕೀಲರಿಂದಃ</u>**

1. ನಾನು ಈಗ ದ್ವಿತಿಯ ಪಿ.ಯು.ಸಿ ಮುಗಿಸಿರುತ್ತೇನೆ. ಅಪಘಾತದ ಸಮಯದಲ್ಲಿ ನಾನು 10 ನೇ ತರಗತಿಯಲ್ಲಿ ಇದ್ದೆ. ಅಪಘಾತ ಆದಾಗಿನಿಂದ ಇಲ್ಲಿಯವರೆಗೆ ನನ್ನ ಶಾಲೆಗೆ ಹೋಗುತ್ತಿದ್ದೇನೆ ನನ್ನ ವಿದ್ಯಾಭ್ಯಾಸ ನಿಂತಿರುವುದಿಲ್ಲ.ಅಪಘಾತ ದಿಃ21-01-2022 ರಂದು ಆಗಿದೆ.

ನಾನು ಆ ದಿನ ರಾಣಾಪುರ ಗ್ರಾಮಕ್ಕೆ ನನ್ನ ಅಜ್ಜನ ಮನೆಗೆ ಬೀಗ ಕೊಡಲು ಹೋಗುತ್ತಿದ್ದೆ. ನಾನು ಮತ್ತು ರೋಹಿತ ಹೋಗುತ್ತಿದ್ದೆವು. ನಾನು ನಡೆದುಕೊಂಡು ಹೋಗುತ್ತಿದ್ದೆ. ಅಪಘಾತ ಪಡಿಸಿದ ವಾಹನ ನನ್ನ ಎದುರುಗಡೆಯಿಂದ ಬಂದು ಡಿಕ್ಕಿ ಪಡಿಸಿರುತ್ತದೆ. ನಾನು ಹೋಗುತ್ತಿದ್ದ ರಸ್ತೆ 30 ಪೀಟ ಅಗಲ ಇದೆ ಎಂದರೆ ಸರಿ. ಎದುರುಗಡೆಯಿಂದ ಬರುವ ವಾಹನಗಳು ಕಾಣಿಸುತ್ತವೆ ಎಂದರೆ ಸರಿ. ಇದೆ ವಾಹನದಿಂದ ಅಪಘಾತ ಆಗಿದೆ ಎಂದು ನಾನು ಪೋಲಿಸರಿಗೆ ಹೇಳಿಲ್ಲ. ಅಪಘಾತದ ಸಮಯದಲ್ಲಿ ಅಪಘಾತದ ಸ್ಥಳದಲ್ಲಿ ನಾನು ಮತ್ತು ರೋಹಿತರವರನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ಅಪಘಾತದ ಬಗ್ಗೆ ದೂರನ್ನು ನನ್ನ ತಂದೆ ಕೊಟ್ಟಿರುತ್ತಾರೆ. ದೂರು ಕೊಡುವಾಗ ನಾನು ಅಪಘಾತ ಪಡಿಸಿದ ವಾಹನದ ಸಂಖ್ಯೆ ಹೇಳಿಲ್ಲ ಗಾಡಿಯ ಬಗ್ಗೆ ಹೇಳಿದ್ದೆ. ವಾಹನ ಸಂಖ್ಯೆ ಕೆ. ಎ 32 ಇಯು 7163 ವಾಹನದಿಂದ ನನ್ನ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ.ಅಪಘಾತ ಪಡಿಸಿದ ನಂತರ ಅಪಘಾತ ಪಡಿಸಿದ ವ್ಯಕ್ತಿ ಸ್ಥಳದಿಂದ ಓಡಿ ಹೋಗಿರುತ್ತಾನೆ. ಅಪಘಾತ ಪಡಿಸಿದ ನಂತರ ಅಪಘಾತ ಪಡಿಸಿದ ವ್ಯಕ್ತಿ ಸ್ಥಳದಿಂದ ಓಡಿ ಹೋಗಿರುತ್ತಾನೆ ಎಂದು ನನ್ನ ತಂದೆಗೆ ನಾನು ಹೇಳಿಲ್ಲ ಆದರೆ ಗಾಡಿ ಬಂದು ಹೊಡೆದು ಹೋಗಿದೆ ಎಂದು ನನ್ನ ತಂದೆಗೆ ಹೇಳಿರುತ್ತೇನೆ.

2. ಅಪಘಾತ ಆದ ನಂತರ ನೇರವಾಗಿ ಕಾಮರೆಡ್ಡಿ ಆಸ್ಪತ್ರೆಗೆ ಹೋಗಿರುತ್ತೇನೆ. ನನ್ನ ಬಿಡುಗಡೆ ಪತ್ರದ ಪ್ರಕಾರ ನಾನು ಆಸ್ಪತ್ರೆಯಲ್ಲಿ ನಾನು 5 ದಿನ ಇದ್ದನು ಎಂದರೆ ಸಾಕ್ಷಿ 7 ದಿನ ಇದ್ದೆನೆ ಎಂದು ಹೇಳುತ್ತಾರೆ. ಆಸ್ಪತ್ರೆಯಿಂದ ಬಿಡುಗಡೆ ಆದ ನಂತರ ಇಲ್ಲಿಯವರೆಗೆ ಮತ್ತೆ ಬೇರೆ ಯಾವುದೇ ಆಸ್ಪತ್ರೆಗೆ ಹೋಗಿಲ್ಲ ಆದರೆ ಕಾಮರೆಡ್ಡಿ ಆಸ್ಪತ್ರೆಗೆ 2 -3 ಬಾರಿ ಹೋಗಿದ್ದೆ, ರಾಡ ತೆಗೆಸಲು ಹೋಗಿದ್ದೆ. ರಾಡ ತೆಗೆಸಲು ಹೋಗಿದ್ದೆ, ಎಂದು ತೋರಿಸಲು ದಾಖಲೆ ಸಲ್ಲಿಸಿರುತ್ತೇನೆ. ನನಗೆ ಯಾವುದೇ ಅಂಗನ್ಯೂನ್ಯತೆ ಆಗಿರುವುದಿಲ್ಲ ಆದರು ಸಹ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಅಂಗನ್ಯೂನ್ಯತೆ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಂಪೂರ್ಣವಾಗಿ ಗುಣವಾಗಿದ್ದರಿಂದ ನನ್ನ ರಾಡ ತೆಗೆಯಲಾಯಿತು ಎಂದರೆ ಸಾಕ್ಷಿ ನನಗೆ ಇನ್ನು ನೋವು ಇದೆ ಎಂದು ಹೇಳುತ್ತಾರೆ. ನನ್ನ ಚಿಕಿತ್ಸೆಗಾಗಿ ರೂ.3,00,000/- ಖರ್ಚು ಮಾಡಿರುತ್ತೇನೆ ಎಂದು ತೋರಿಸಲು ಯಾವುದೇ ದಾಖಲೆ ಸಲ್ಲಿಸಿಲ್ಲ ಎಂದರೆ ಸರಿ. ಮುಂದಿನ ಚಿಕಿತ್ಸೆಗಾಗಿ ರೂ.2,00,000/- ಬೇಕು ಎಂದು ಯಾವುದೇ ದಾಖಲೆ ಸಲ್ಲಿಸಿಲ್ಲ ಎಂದರೆ ಸರಿ. ನಾನು ಮತ್ತು ರೋಹಿತರವರು ಅಪಘಾತ ಸಮಯದಲ್ಲಿ ಕೆಲಸ ಮಾಡುತ್ತಿರಲಿಲ್ಲ ನಾವು ವಿದ್ಯಾರ್ಥಿ ಆಗಿದ್ದೇವೆ ಎಂದು ದೂರಿನಲ್ಲಿ ಬರೆದಿರುತ್ತಾರೆ ಎಂದರೆ ಸರಿ. ನಾನು ವಸತಿ ಶಾಲೆಯಲ್ಲಿ ಇರುತ್ತಾನೆ ಎಂದು ಬರೆಸಿರುತ್ತಾರೆ ಎಂದರೆ ಸರಿ. ನಾನು ಹಾಸ್ಟನಲ್ಲಿ ಇದ್ದು ಹಾಲು ಹೇಗೆ ಮಾರಾಟ ಮಾಡುತ್ತೇನೆ

ಎಂದರೆ ಸಾಕ್ಷಿ ಯಾವುದೇ ಉತ್ತರ ಕೊಟ್ಟಿರುವುದಿಲ್ಲ. ಪೋಲಿಸರು ಆಸ್ಪತ್ರೆಗೆ ಬಂದು ಹೇಳಿಕೆ ಬರೆದುಕೊಂಡು ಹೋಗಿರುತ್ತಾರೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಸಲ್ಲಿಸಿಲ್ಲ ಎಂದರೆ ಸಾಕ್ಷಿ ಸಲ್ಲಿಸಿರುತ್ತೇನೆ ಎಂದು ಹೇಳುತ್ತಾರೆ. ನನಗೆ ಅಪಘಾತ ಪಡಿಸಿದ ವಾಹನದ ವಿಮೆ ಇರಲಿಲ್ಲ ಆದ್ದರಿಂದ ಅಪಘಾತ ಆದ 2 ದಿನಗಳ ನಂತರ ಹೀರಾಸಿಂಗರವರ ವಿಮೆ ಇರುವ ಗಾಡಿಯನ್ನು ಬಳಸಿಕೊಂಡು ಸುಳ್ಳು ದೂರು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

3. ಕಾಮರೆಡ್ಡಿ ಆಸ್ಪತ್ರೆಯಲ್ಲಿ ನಾನು 7 ದಿನ ಇದ್ದೆ. ನಾನು ಪರಿಹಾರದ ಹಣ ಪಡೆಯುವ ಉದ್ದೇಶದಿಂದ ನಾನು ಪೋಲಿಸರು ಹಾಗೂ ಸಂಜುಕುಮಾರ ಸೇರಿಕೊಂಡು ಸುಳ್ಳು ದೂರು ದಾಖಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.